ನನ್ನನ್ನು ಅಮೆರಿಕಕ್ಕೆ ಕರ್ಕೊಂಡು ಹೋದ. ಹೀಗಾಗಿ ನಾನು ಇಲ್ಲಿಗೆ ಬರೋಕೆ ಆಗಲೇ ಇಲ್ಲ. ಆದರೆ ನನ್ನ ಮನಸ್ಸೆಲ್ಲ ಇಲ್ಲೇ ಇತ್ತು. ಒಂದಲ್ಲ ಒಂದು ದಿನ ನನ್ನ ಮಗು ಇಲ್ಲೇ ನನಗೆ ಸಿಗುತ್ತೆ ಅಂತ ಆಸೆ ಇತ್ತು" ಅಂತ ಮಾತಾಡ್ತಾ ಇದ್ದೋಳು ಓಡಿ ಹೋಗಿ ಸ್ಟೇಷನ್ ಮಾಸ್ಟರ್ ಬಳಿ ಏನೋ ಕೇಳಿದಳು. ಅಂಗಡಿ ಬಳಿ ಹೋಗಿ ಏನೋ ಕೇಳಿದಳು. ಅಲ್ಲೆಲ್ಲಾ ಪರಪರ ಅಂತ ಓಡಾಡಿದಳು. ನಂತರ ನಿರಾಸೆಯಿಂದ ಬಂದಳು. ನಿರ್ಮಲ ಅವಳನ್ನೇ ಗಮನಿಸುತ್ತಿದ್ದಳು. "25 ವರ್ಷಗಳ ಹಿಂದೆ ಬಿಟ್ಟು ಹೋದ ನನ್ನ ಮಗು ನನಗೆ ಸಿಗೋದುಂಟೇ? ನನಗೆಲ್ಲೋ ಹುಚ್ಚು ಅಷ್ಟೆ. ಆದ್ರೆ ನಾನು ನನ್ನ ಮಗೂನ ಬಿಟ್ಟು ಹೋದ ಜಾಗಾನಾದ್ರೂ ನೋಡೋಣ ಅಂತ ಬಂದೆ. ಇಲ್ಲ ಇಲ್ಲ ಇನ್ನು ನನ್ನ ಮಗು ನನ್ನ ಕೈಗೆ ಸಿಗೋದಿಲ್ಲ, ಯಾರೂ ಗತಿಯಿಲ್ದೆ ಅದು ಅವತ್ತೇ ಸತ್ತುಹೋಗಿರಬೇಕು, ಅಥವಾ ಅದನ್ನು ಯಾರಾದರೂ ತಗೊಂಡು ಹೋಗಿರಬಹುದು. ಅದನ್ನು ಈಗ ಹೇಗೆ ಪತ್ತೆ ಮಾಡೋಕೆ ಆಗುತ್ತೆ" ಅಂತ ಅತ್ತೇಬಿಟ್ಟಳು. ರೈಲು ಹೊರಡೋ ಸಮಯವಾಯಿತು. ಹಾಗಂತ ಅದು ಕೂಗು ಹಾಕಿತು. ಆ ಹೆಂಗಸು ಓಡಿ ಹೋಗಿ ರೈಲು ಹತ್ತಿದಳು. "ನನ್ನ ಮಗು ನನಗೆ ಇಲ್ಲೇ ಸಿಗುತ್ತೆ ಇನ್ನೊಂದು ದಿನ ನಾನು ಬಂದೇ ಬರ್ತೀನಿ" ಅಂತ ಆಕೆ ನಿರ್ಮಲಳಿಗೆ ಹೇಳುತ್ತಾ ರೈಲು ಹತ್ತಿದಳು. ರೈಲು ಹೊರಟುಹೋಯಿತು. ನಿರ್ಮಲಳ ಕಣ್ಣಲ್ಲಿ ನೀರು ಸುರಿದಿತ್ತು.

ಮನೆಗೆ ಬಂದಾಗ ಮುರುಳಿ ಯಾಕೇ ಏನಾಯ್ತು ಅಂತ ಕೇಳಿದಾಗ ಎಲ್ಲವನ್ನೂ ಹೇಳಿಕೊಂಡು ಮತ್ತೆ ಅತ್ತಳು. ''ನೋಡು ನೀನು ಈಗ ಬಸುರಿ, ಡಾಕ್ಟರು ಹುಷಾರಾಗಿರಬೇಕು ಅಂತ ಹೇಳಿದ್ದಾರಲ್ಲ ಅಳಬೇಡ, ಹಾಗೇ ರೈಲ್ವೇ ಸ್ಟೇಷನ್ನಿಗೆ ಹೋಗೋದನ್ನು ನಿಲ್ಲಿಸು" ಅಂತ ಸಮಾಧಾನ ಮಾಡಿದ.

ಒಂದೆರಡು ದಿನ ಕಳೆದ ಮೇಲೆ ಒಂದು ರಾತ್ರಿ ಮಲಗಿರುವಾಗ ನಿರ್ಮಲಳಿಗೆ ದಿಗ್ಗನೆ ಎಚ್ಚರವಾಯಿತು. ಮುರುಳಿಯನ್ನೂ ಎಬ್ಬಿಸಿದಳು. "ರೀ ಅಪ್ಪ ಯಾಕೆ ದಿನಾ ರೈಲ್ವೇ ಸ್ಟೇಷನ್ನಿಗೆ ಹೋಗ್ತಿದ್ರು ಅಂತ ಗೊತ್ತಾಯ್ತು ರೀ. ನಾನು ಅಪ್ಪನ ಮಗಳಲ್ಲ, ನನ್ನ ತಾಯಿಯನ್ನು ನಾನು ಅವತ್ತು ನೋಡಿದೆ ಅವಳೇ ನನ್ನ ತಾಯಿ. ಕಣ್ಣು ಗುರುತಿಸದಿದ್ದರೂ ಕರುಳು ಯಾಕೆ ಗುರುತಿಸಲಿಲ್ಲ, ಪಾಪಿ ನಾನು, ಪಾಪಿ, ಹೆತ್ತಮ್ಮನನ್ನೇ ಗುರುತಿಸದೇ ಹೋದೆ" ಅಂತ ಎಲ್ಲವನ್ನೂ ಹೇಳಿಕೊಂಡು ಅತ್ತಳು.

ಎಷ್ಟೋ ಹೊತ್ತಾದ ಮೇಲೆ ಅವಳು ಗಂಡನ ಬಳಿ ಬಂದು, "ರೀ, ಹೌದಲ್ವೇನ್ರೀ ಇಪ್ಪತ್ತೈದು ವರ್ಷಗಳಿಗೂ ಹಿಂದೆ ನನ್ನ ತಾಯಿ ನನ್ನನ್ನು ಇಲ್ಲಿ ಅನಾಥಳನ್ನಾಗಿ ಮಾಡಿ ಹೋದಳು. ಅಪ್ಪ ತಂದು ನನ್ನನ್ನು ಸಾಕಿದರು. ಆದರೆ ಒಂದಲ್ಲ ಒಂದು ದಿನ ಅಮ್ಮ ಬಂದೇ ಬರ್ತಾಳೆ ಅಂತ ದಿನಾ ಅವರೂ ರೈಲ್ವೇ ಸ್ಟೇಷನ್ನಿಗೆ ಹೋಗೋರು; ನನ್ನನ್ನೂ ಕರೆದುಕೊಂಡು ಹೋಗೋರು. ಆದರೆ ಅಪ್ಪನ ಬಾಯಿಂದ ನೀನು ನನ್ನ ಮಗಳಲ್ಲ, ರೈಲ್ವೇ ಸ್ಟೇಷನ್ನಿನಲ್ಲಿ ಸಿಕ್ಕಿದವಳು ಅಂತ ಹೇಗೆ ಹೇಳೋದು ಅಂತ ಆ ಸತ್ಯಾನ ಅವರಲ್ಲೇ ಬಚ್ಚಿಟ್ಟುಕೊಂಡಿದ್ರು. ಒಂದು ವೇಳೆ ಅಪ್ಪ ಇರುವಾಗಲೇ ನನ್ನ ತಾಯಿ ಬಂದಿದ್ದರೆ ಎಲ್ಲವೂ ಇತ್ಯರ್ಥವಾಗಿರೋದು. ಆದರೆ ಸತ್ಯ ಅಪ್ಪನ ಮನಸ್ಸಿನಲ್ಲೇ ಉಳಿದುಹೋಯ್ತು. ಆದರೆ ನನ್ನ ಅಮ್ಮ..." ಅಂತ ಬಿಕ್ಕಿ ಬಿಕ್ಕಿ ಅತ್ತಳು. ಮುರುಳಿ ಅವಳನ್ನು ಸಮಾಧಾನ ಮಾಡ್ತಾ "ನೋಡು ಯಾವುದಕ್ಕೆ ಯಾವುದನ್ನೋ ಹೋಲಿಸಿಕೊಂಡು ಅಳಬೇಡ. ಹಾಗೆಲ್ಲ ಏನೂ ಆಗಿರಲ್ಲ. ನೀನು ನಿನ್ನ ತಂದೆಯ ಮಗಳೇ. ಈ ಮನೆಯ ಮಗಳೇ... ಆ ಹೆಂಗಸು ಬಿಟ್ಟು ಹೋದ ಮಗು ಯಾರೋ ಏನೋ" ಅಂದ.